# ನಾಳೆಯಿಂದ ಕೃಷಿ ಮೇಳ: ಅಪರೂಪದ 'ಕೀಟ ಸಂಕುಲ' ಅನಾವರಣ

Kannadaprabha pg 04

**ಬೆಂಗಳೂರು:** ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ ಹೆಬ್ಬಾಳದ ಜಿಕೆವಿಕೆಯಲ್ಲಿ ನ.13 ರಿಂದ 16 ರವರೆಗೆ ಆಯೋಜಿಸಿರುವ 'ಕೃಷಿ ಮೇಳ'ಕ್ಕೆ ಸಿದ್ಧತೆಗಳು ಭರದಿಂದ ಸಾಗಿವೆ. ಇದೇ ಮೊದಲ ಬಾರಿಗೆ 'ಕೀಟ ವಿಸ್ಮಯ' ಪ್ರದರ್ಶನ ಆಯೋಜಿಸಿದ್ದು ವಿಶೇಷ ಆಕರ್ಷಣೆಯಾಗಿದೆ. ಈ ಕೃಷಿ ಮೇಳದಲ್ಲಿ ಪ್ರಪ್ರಥಮ ಬಾರಿಗೆ ಕೀಟ ಲೋಕದ ಅನಾವರಣವಾಗಲಿದೆ. ಇದಕ್ಕಾಗಿ 'ಕೀಟ ವಿಸ್ಮಯ' ಪ್ರದರ್ಶನ ಆಯೋಜಿಸಿದ್ದು 3 ಶಾಲೆಗಳ ಮಕ್ಕಳು ಕೀಟಗಳನ್ನು ಹಾರಿ ಬಿಡುವ ಮೂಲಕ ಪ್ರದರ್ಶನಕ್ಕೆ ಚಾಲನೆ ನೀಡಲಿರುವುದು ವಿಶೇಷವಾಗಿದೆ. ಕೀಟಗಳ ವೈವಿಧ್ಯತೆ, ವೈಶಿಷ್ಟ್ಯತೆ, ವಿಭಿನ್ನ ಹಾಗೂ ವಿಸ್ಮಯಕಾರಿ ಜೀವನ ಚರಿತ್ರೆಯನ್ನು ತಿಳಿಸಿ ಕೊಡಲಾಗುವುದು. ರೈತರಿಗೆ ಉಪಕಾರಿಯಾದ ಪರಾಗ ಸ್ಪರ್ಶ ಕೀಟಗಳು, ಬೆಳೆಗೆ ಹಾನಿಕಾರಕವಾದ ಕೀಟಗಳು, ಮನುಷ್ಯರಿಗೆ ಮತ್ತು ಜಾನುವಾರುಗಳಿಗೆ ರೋಗ ಹರಡುವ ಕೀಟಗಳು, ಚಿತ್ತಾಕರ್ಷಕ ಚಿಟ್ಟೆಗಳು, ಬಹುರೂಪಿ ದುಂಬಿಗಳು, ಜೀರುಂಡೆ ಸೇರಿದಂತೆ ಅಪರೂಪದ ಕೀಟ ಸಂಕುಲವನ್ನೇ ಇಲ್ಲಿ ಕಾಣಬಹುದು. ಕೀಟಗಳಿಂದ ಸಿದ್ಧಪಡಿಸಿರುವ ಆಭರಣ, ತಿನಿಸು, ಹಲವು ದೇಶಗಳು ಕೀಟಗಳ ಗೌರವಾರ್ಥ ಹೊರತಂದಿರುವ ಅಂಚೆ ಚೀಟಿಗಳು, ಕೀಟಗಳ ಜೀವನ ಶೈಲಿಯ ಮಾದರಿಗಳನ್ನೂ ವೀಕ್ಷಿಸಬಹುದು.



# ತಿಪಟೂರು ಕೊಬ್ಬರಿಗೆ ಶೀಘ್ರವೇ ಜಿಐ

## ಭೌಗೋಳಿಕ ಮಾನ್ಯತೆ ಬೇಡಿಕೆ ಈಡೇರಿಕೆ ವಿಶ್ವಾಸ

■ **ಶಶಿಧರ್ ಎಸ್.ದೋಣಿಹಕ್ಲು** ತುಮಕೂರು
shashidara.ds@timesofindia.com


ತಿಪಟೂರು ಕೊಬ್ಬರಿಗೆ ಶೀಘ್ರದಲ್ಲೇ ಭೌಗೋಳಿಕ ಮಾನ್ಯತೆ ಸಿಗುವ ನಿರೀಕ್ಷೆಯಿದ್ದು, ಬಹುಕಾಲದ ಬೇಡಿಕೆ ಸದ್ಯದಲ್ಲೇ ಈಡೇರುವ ವಿಶ್ವಾಸ ಮೂಡಿದೆ. ತಿಪಟೂರು ಕೊಬ್ಬರಿಗೆ ಕಾನೂನು ರಕ್ಷಣೆ ದೊರೆತು ಅನಧಿಕೃತ ಬಳಕೆಯಿಂದ ಕೊಬ್ಬರಿಯನ್ನು ರಕ್ಷಿಸುತ್ತದೆ, ಜತೆಗೆ ಬ್ರ್ಯಾಂಡ್ ಮೌಲ್ಯವನ್ನು ಕಾಪಾಡುತ್ತದೆ.

ಇಡೀ ಏಷ್ಯಾ ಖಂಡದಲ್ಲೇ ಬಹು ಬೇಡಿಕೆ ಇರುವ, ಅತ್ಯಂತ ದೊಡ್ಡ ಮಾರುಕಟ್ಟೆಯನ್ನು ಹೊಂದಿರುವ ರುಚಿಕರ ತಿಪಟೂರು ಕೊಬ್ಬರಿಗೆ ಭೌಗೋಳಿಕ ಸೂಚ್ಯಂಕ ಸಿಗಬೇಕೆಂಬುದು ತಿಪಟೂರು ರೈತರ ಬೇಡಿಕೆಯಾಗಿತ್ತು. ಈ ಬಗ್ಗೆ ಸಾಕಷ್ಟು ವರ್ಷಗಳಿಂದಲೇ ಚರ್ಚೆಯಾಗುತ್ತಿದ್ದರೂ, ಅನುಷ್ಠಾನ ಕ್ರಮ ವಿಳಂಬವಾಗುತ್ತಲೇ ಇದೆ. ಈಗ ಅದಕ್ಕೆ ಮುಹೂರ್ತ ಕೂಡಿ ಬಂದಿದೆ.

ತಿಪಟೂರು ಎಪಿಎಂಸಿಯಲ್ಲಿ ತೋಟಗಾರಿಕೆ ಇಲಾಖೆ, ಎಪಿಎಂಸಿ ಅಧಿಕಾರಿಗಳು ಸಭೆ ನಡೆಸಿದ್ದಾರೆ. ತೆಂಗು ಮತ್ತು ಕೊಬ್ಬರಿಗೆ ಭೌಗೋಳಿಕ ಸೂಚ್ಯಂಕ ಪಡೆಯಲು ತಿಪಟೂರು ರೈತ ಉತ್ಪಾದಕರ ಸಂಘ ಹಾಗೂ ಕೊಕೊನೆಟ್ ಎಫ್‌ಪಿಒ ಅರ್ಜಿದಾರರಾಗಿ ದ್ದಾರೆ. ತೋಟಗಾರಿಕೆ ಇಲಾಖೆ , ನಬಾರ್ಡ್ ಧನ ಸಾಹಯ ಮಾಡುವಂತೆ ಹಾಗೂ ಎಪಿಎಂಸಿ ಸಹಕಾರ ನೀಡುವಂತೆ ಸಭೆಯಲ್ಲಿ ನಿರ್ಣಯಿಸಲಾಗಿದೆ.


**ಮುಂದಿನ ಹಂತ ಏನು?:** ಉಂಡೆ ಕೊಬ್ಬರಿ ಗುಣಮಟ್ಟ ಪರೀಕ್ಷೆಗೆ ಹೋಗಬೇಕು, ವೈಜ್ಞಾನಿಕ ಭೌಗೋಳಿಕ ಪ್ರದೇಶ ನಿಗದಿ ಪಡಿಸಬೇಕು. ಸದ್ಯ ಗುಣಮಟ್ಟದ ಕೊಬ್ಬರಿಯಲ್ಲಿ ಮೊದಲ ಸ್ಥಾನದಲ್ಲಿರುವ ತಿಪಟೂರು, ಗುಬ್ಬಿ, ಚಿಕ್ಕನಾಯಕನಹಳ್ಳಿ, ಚನ್ನರಾಯಪಟ್ಟಣ, ಅರಸೀಕೆರೆ ಮತ್ತು ಹೊಸದುರ್ಗವನ್ನು ಪ್ರಾಥಮಿಕ ಪ್ರದೇಶಗಳಾಗಿ ನಿಗದಿ ಪಡಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಲ್ಯಾಬ್ ರಿಪೋರ್ಟ್, ಪ್ರದೇಶ ನಿಗದಿ ಆದ ಮೇಲೆ ಅರ್ಜಿದಾರರು ಅದನ್ನು ಸಾಬೀತುಪಡಿಸಬೇಕು. ಆ ನಂತರ ಕೇಂದ್ರದ ಜಿಐ ಮಾನ್ಯತೆ ಸಿಗುತ್ತದೆ. ಇದು 2-3 ವರ್ಷದ ಪ್ರಕ್ರಿಯೆಯಾಗಿದೆ.



### ಭೌಗೋಳಿಕ ಸೂಚ್ಯಂಕದಿಂದ ಏನು ಲಾಭ?

- ಭೌಗೋಳಿಕ ಸೂಚ್ಯಂಕ ಸಿಕ್ಕ ಬಳಿಕ ತಿಪಟೂರು ಕೊಬ್ಬರಿ ರಫ್ತಾಗುವ ದೇಶಗಳಲ್ಲಿಯೂ ಮಾನ್ಯತೆ ಮತ್ತು ಮೌಲ್ಯ ಸಿಗಲಿದೆ.
- ನೈಸ[illegible] ತಮಿಳುನಾಡು, ಕೇರಳ ಕೊಬ್ಬರಿ ನಡುವೆ ಪೈಪೋಟಿ ತಪ್ಪಿ, ಆರೋಗ್ಯಕರ ಸ್ಪರ್ಧೆ ಏರ್ಪಡುತ್ತದೆ.
- ಅನಧಿಕೃತ ಬಳಕೆಯಿಂದ ರಕ್ಷಣೆ ಸಿಗುತ್ತದೆ.
- ಉತ್ಪಾದಕರಿಗೆ ಹೆಚ್ಚಿನ ಲಾಭ ಪಡೆಯಲು ನೆರವು
- ಕೊಬ್ಬರಿ ಸಂಸ್ಕೃತಿ, ಪರಂಪರೆ ರಕ್ಷಣೆ
- ಉದ್ಯಮಶೀಲತೆ, ಉದ್ಯೋಗ ಸೃಷ್ಟಿಗೆ ಪ್ರೋತ್ಸಾಹ
- ಗ್ರಾಹಕರಿಗೆ ಬ್ರ್ಯಾಂಡೆಡ್ ಕೊಬ್ಬರಿ, ಕೊಬ್ಬರಿ ಉತ್ಪನ್ನ ಲಭ್ಯತೆ



ತಿಪಟೂರು ಕೊಬ್ಬರಿಗೆ ಭೌಗೋಳಿಕ ಸೂಚ್ಯಂಕ ಸಿಗಬೇಕೆಂಬುದು ರೈತರ ಬಹುಕಾಲದ ಬೇಡಿಕೆ. ಸಂಬಂಧಿಸಿದ ಎಲ್ಲರೂ ಗಂಭೀರವಾಗಿ ಪ್ರಯತ್ನಿಸಿದರೆ, ಪ್ರಕ್ರಿಯೆಗೆ ವೇಗ ನೀಡಿದರೆ ಇನ್ನು 2-3 ವರ್ಷದಲ್ಲಿ ಜಿಐ ಸಾಧ್ಯ.

– **ಶ್ರೀಕಾಂತ್ ಕೆಳಹಟ್ಟಿ**
ರಾಜ್ಯ ಕಾರ್ಯದರ್ಶಿ, ಬೆಲೆ ಕಾವಲು ಸಮಿತಿ

V-karantaka pg 05

# ಉದ್ದಿಮೆಯಾಗಿ ಬೆಳೆಯಲಿ ಕೃಷಿ

ಮೋಹನ್ ವಿಶ್ವ ಅವರ 'ಡಾ. ಸ್ವಾಮಿನಾಥನ್ ಮತ್ತು ನರೇಂದ್ರ ಮೋದಿ' ಶೀರ್ಷಿಕೆಯ ಅಂಕಣ ಬರಹ (ನ.8) ಚೆನ್ನಾಗಿ ಮೂಡಿಬಂದಿದೆ. ಸ್ವಾಮಿನಾಥನ್ ಆಯೋಗದ ಹಲವು ಶಿಫಾರಸುಗಳನ್ನು ಮೋದಿಯವರು ಹಂತಹಂತವಾಗಿ ಅನುಷ್ಠಾನಗೊಳಿಸಿರುವುದರಿಂದಾಗಿ, ಕಳೆಗುಂದಿದ ರೈತರ ಕಂಗಳಲ್ಲಿ ಭರವಸೆ ಮೂಡಿರುವುದಂತೂ ನಿಜ. ವಿವಿಧ ಬೆಳೆ ಬೆಳೆಯಲು ತಗಲುವ ಖರ್ಚುವೆಚ್ಚಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ, ತದನಂತರವೇ ಬೆಂಬಲ ಬೆಲೆ ನಿರ್ಧರಿಸುವಿಕೆ, ಕೃಷಿ ಸಿಂಚಾಯಿ, ಪ್ರಧಾನಮಂತ್ರಿ ಕೃಷಿ ಸಮ್ಮಾನ್, ಕಿಸಾನ್ ರೈಲು ಯೋಜನೆ ಹೀಗೆ ಹತ್ತು ಹಲವು ಕಾರ್ಯಕ್ರಮಗಳ ಮೂಲಕ ರೈತರ ಸಮಸ್ಯೆಗಳ ಹೊರೆಯನ್ನು ತುಸು ಕಡಿಮೆ ಮಾಡಲು ಮೋದಿಯವರ ಸರಕಾರವು ಪ್ರಾಮಾಣಿಕವಾಗಿ ಪ್ರಯತ್ನಿಸಿದೆ ಎಂಬುದು ನಿರ್ವಿವಾದ.

ಈ ಯೋಜನೆಗಳ ಫಲ ಎಲ್ಲರಿಗೂ ಸಮಾನವಾಗಿ ತಲುಪುವುದಾಗಲೀ, ತಲೆತಲಾಂತರದ ಸಮಸ್ಯೆಗಳನ್ನು ಬಗೆಹರಿಸುವುದಾಗಲೀ ತಕ್ಷಣಕ್ಕೆ ಆಗದ ಮಾತೇ ಸರಿ. ಆದಾಗ್ಯೂ, ಕೆಲವೊಂದು ಸುಧಾರಣೆಗಳು ರೈತರ ಸಂಘರ್ಷಮಯ ಬದುಕಿನಲ್ಲಿ ಉತ್ಸಾಹವನ್ನು ತಂದಿವೆ. ಉದಾಹರಣೆಗೆ, ಅನ್ಯ ಉದ್ದೇಶಕ್ಕೆ ಬಳಕೆಯಾಗುವ ಯೂರಿಯಾಗೆ ಬೇವು ಲೇಪಿಸಿ, ರಸಗೊಬ್ಬರ ಕೊರತೆಗೆ ಇತಿಶ್ರೀ ಹಾಡುವಿಕೆ; ಖಂಡಿತವಾಗಿಯೂ ಇದೊಂದು ಕ್ರಾಂತಿಕಾರಕ ಮತ್ತು ಅಭಿನಂದನಾರ್ಹ ಕ್ರಮ. ಮುಂಗಾರಿನ ಆಗಮನದಿಂದಾಗಿ ಬೀಜ ಬಿತ್ತನೆಯ ಸಂಭ್ರಮದಲ್ಲಿ, ಎಲ್ಲೆಲ್ಲಿಂದಲೋ ಹಣ ಹೊಂದಿಸಿಕೊಂಡು ಯೂರಿಯಾ ಖರೀದಿಗೆ ಹೋದವರಿಗೆ ಆಘಾತ ಕಾದಿರುತ್ತಿತ್ತು, 'ದಾಸ್ತಾನು ಮುಗಿದಿದೆ' ಎಂಬ ಫಲಕಗಳು ಅಂಗಡಿಯ ಮುಂದೆ ಕಣ್ಣಿಗೆ ರಾಚುತ್ತಿದ್ದವು. ಹೀಗಾಗಿ ಸಕಾಲಕ್ಕೆ ಬಿತ್ತುವ ಭಾಗ್ಯದಿಂದ ರೈತರು ವಂಚಿತರಾಗಿದ್ದರು. ಈಗ ಯೂರಿಯಾ ಅಭಾವಕ್ಕೆ ತೆರೆ ಬಿದ್ದಿರುವುದು, ಕೃಷಿಕರ ಪಾಲಿಗೆ ಮಹತ್ವದ ಮೈಲಿಗಲ್ಲು ಎನ್ನಲಡ್ಡಿಯಿಲ್ಲ.



ದಶಕಗಳಿಂದಲೂ ನಮ್ಮ ಕೃಷಿ ವಲಯ ತೆವಳುತ್ತಲೇ ಮುಂದೆ ಸಾಗಿತೇ ಹೊರತು, ದೇಶದ ಇತರ ಆರ್ಥಿಕ ವಲಯಗಳ ಜತೆಗೆ ಸಮಾನ ಹೆಜ್ಜೆಯಿಡಲಿಲ್ಲ; ಹೆಜ್ಜೆ ಇಡುವುದಿರಲಿ, ಹಾಗೆ ಯೋಚಿಸುವುದು ಕೂಡ ತಪ್ಪು ಎಂಬುದು ನಮ್ಮ ರೈತರಿಗೆ ಮನದಟ್ಟಾಗಿತ್ತು. ಅವರು ತಮ್ಮ ಹೀನಾಯ ಸ್ಥಿತಿಗೆ 'ನಮ್ಮದು ಪೂರ್ವಜನ್ಮದ ಕರ್ಮ' ಎಂದು ತಂತಮ್ಮ ಮನಸ್ಸಿಗೆ ಸಾಂತ್ವನ ಹೇಳಿಕೊಂಡಂತಿದೆ. ಅದಕ್ಕೇ ಇರಬೇಕು, 'ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬೆಳೆದು, ಸಾಲದಲ್ಲೇ ಸಾಯುತ್ತಾರೆ' ಎಂಬ ಮಾತು ಪ್ರಚಲಿತದಲ್ಲಿರುವುದು. ಇನ್ನು ದೇಶದ ಬಹುಸಂಖ್ಯಾತ ರೈತ ಸಮುದಾಯದ ಬೆಂಬಲವಿಲ್ಲದೆ ತಾವು ಅಧಿಕಾರದ ಗದ್ದುಗೆ ಏರಲಾಗದು ಎನ್ನುವ ಕಟುಸತ್ಯವನ್ನು ಅರಿತಿರುವ ಜನನಾಯಕರು, ನಾನಾ ರೀತಿಯ ಆಶ್ವಾಸನೆ ನೀಡಿ ಚುನಾವಣೆಯಲ್ಲಿ ಗೆಲುವು ಸಾಧಿಸುವುದು, ಮರುಗಳಿಗೆಯಲ್ಲೇ ರೈತರನ್ನು ಮರೆತುಬಿಡುವುದು ವಾಡಿಕೆಯಾಗಿತ್ತು. ಹೀಗಾಗಿ, ಸಂಘಟನಾತ್ಮಕ ಶಕ್ತಿಯಿಲ್ಲದ ರೈತ ಸಮುದಾಯದ ಆಶೋತ್ತರಗಳು ಕಮರಿಹೋಗಿದ್ದವು. ಆದರೆ ಈ ತಾರತಮ್ಯದ ಬೆಳವಣಿಗೆಯು ದೇಶದ ಒಟ್ಟು ಅಭಿವೃದ್ಧಿಗೆ ಮಾರಕ ಎಂಬುದನ್ನು ಅರಿತ ಮೋದಿಯವರ ಸರಕಾರ ಒಂದಷ್ಟು ಆಶಾದಾಯಕ ಹೆಜ್ಜೆಗಳನ್ನು ಇರಿಸಿರುವುದು ಶ್ಲಾಘನೀಯ.

ಈಗ, ಇದಕ್ಕೆ ಪೂರಕವಾಗಿ ಇಡಬೇಕಾದ ತುರ್ತುಹೆಜ್ಜೆಗಳತ್ತ ಗಮನಹರಿಸೋಣ:

- ಬಹುಸ್ತರಗಳ ಆರ್ಥಿಕ ಸಂಸ್ಥೆಗಳು ರೈತರ ದುಡ್ಡುಕಾಸಿನ ಅವಶ್ಯಕತೆ ಪೂರೈಸಲು ಟೊಂಕಕಟ್ಟಿ ನಿಂತರೂ ನಿರೀಕ್ಷಿತ ಮಟ್ಟದ ಫಲ ದೊರಕುತ್ತಿಲ್ಲ. ಬಹುತೇಕ ಸಣ್ಣ ಮತ್ತು ಅತಿಸಣ್ಣ ರೈತರು ಸ್ಥಾನಿಕ ಮಧ್ಯವರ್ತಿಗಳ ಬಿಗಿಮುಷ್ಟಿಯಲ್ಲಿ ನಲುಗುತ್ತಿದ್ದಾರೆ. ಇದಕ್ಕೆ ಬಹುಮುಖ್ಯ ಕಾರಣವೇನೆಂದರೆ ತುರ್ತು ನಗದಿನ ಸಮಸ್ಯೆ. ಕೃಷಿ ಮಾರುಕಟ್ಟೆಯಲ್ಲಿ ಫಸಲು ಮಾರಿದರೆ ಕನಿಷ್ಠ ಒಂದು ವಾರವಾದರೂ ಹಣಕ್ಕೆ ಕಾಯಬೇಕು. ಹಾಗೆ ಕಾಯುವಷ್ಟು ತಾಳ್ಮೆ ಬಹುತೇಕ ಸಣ್ಣ ರೈತರಿಗೆ ಇರುವುದಿಲ್ಲ. ಮಧ್ಯವರ್ತಿಗಳಂತೆ 'ಕ್ಯಾಷ್ ಆನ್ ಡೆಲಿವರಿ' ಮಾದರಿಯಲ್ಲಿ ಹಣ ಸಿಗುವಂತಾದರೆ, ರೈತರ ಗುರುತರ ಸಮಸ್ಯೆಗೊಂದು ಪರಿಹಾರ ದೊರಕಿದಂತಾಗುವುದು.
- ಗುಣಮಟ್ಟದ ಬೆಳೆ ಬೆಳೆಯುವುದಷ್ಟೇ ರೈತರ ಕಾಯಕವಾಗಬೇಕೇ ಹೊರತು ಉತ್ಪನ್ನಗಳ ಮಾರಾಟಕ್ಕೆ ಗ್ರಾಹಕರನ್ನು ಹುಡುಕುವುದಲ್ಲ. ಮಾರುಕಟ್ಟೆಯ ನುರಿತ/ಬಲಾಢ್ಯ ಬಹುರಾಷ್ಟ್ರೀಯ ಕಂಪನಿಗಳ ಜತೆ ರೈತ ಸಮುದಾಯಗಳು ಒಡಂಬಡಿಕೆ ಮಾಡಿಕೊಳ್ಳುವಂತಾಗುವಲ್ಲಿ ಸರಕಾರವು ಮಧ್ಯಸ್ಥಿಕೆ ವಹಿಸಬೇಕು.
- ಹಣ್ಣು-ತರಕಾರಿ, ಬೆಳೆಗಳ ಬಹುಪಾಲು ಸೂಕ್ತ ಮಾರುಕಟ್ಟೆ ಅಥವಾ ಶೇಖರಣಾ ವ್ಯವಸ್ಥೆ ಇಲ್ಲದೆ ಹಾಳಾಗುತ್ತಿದೆ. ಈ ವಿಷಯದಲ್ಲಿ ಸರಕಾರವು ಇಚ್ಛಾಶಕ್ತಿಯನ್ನು ಮೆರೆದಲ್ಲಿ ರೈತರ ಸಂಕಷ್ಟಗಳು ಕಮ್ಮಿಯಾದಾವು. ಸರಕಾರವು ಕೃಷಿ ಇಲಾಖೆ/ಸಂಶೋಧನಾ ಇಲಾಖೆಗಳ ಮೂಲಕ, ತಾಲೂಕು/ಹೋಬಳಿ ಮಟ್ಟದಲ್ಲಿ ಬೆಳೆಯಬಹುದಾದ ಪ್ರಮುಖ ಬೆಳೆಗಳನ್ನು ಗುರುತಿಸಿ ಪ್ರಾಯೋಜಿಸಿದಲ್ಲಿ ರೈತ ಸಮುದಾಯಕ್ಕೆ ಅಗಾಧ ಸಹಾಯವಾಗಲಿದೆ.
- ಕೃಷಿಯ ಉಪ ಉತ್ಪನ್ನಗಳನ್ನು ಬಳಸಿಕೊಂಡು ಸಣ್ಣ ಪ್ರಮಾಣದ ಉದ್ದಿಮೆ ನಡೆಸುವ ಕೌಶಲಗಳು ಮುಕ್ತವಾಗಿ ರೈತರನ್ನು ತಲುಪುವಂತಾಗಬೇಕು. ಕುರಿ, ಕೋಳಿ ಸಾಕಣೆ, ಹೈನುಗಾರಿಕೆಯಂಥ ಉಪಕಸುಬುಗಳಲ್ಲಿ ರೈತರು ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಿ, ಅವರ ಕೈಯಲ್ಲಿ ಸಣ್ಣ ಮಟ್ಟದ ಹಣವು ನಿರಂತರವಾಗಿ ಹರಿದಾಡುವಂತೆ ನೋಡಿಕೊಳ್ಳಬೇಕು.
- ಸಂಕಷ್ಟದ ಸಮಯದಲ್ಲಿ ದೃಢವಾಗಿ ನಿಂತು ಸಂಭಾಳಿಸಬಲ್ಲ ನಂಬಿಕಸ್ತರ ಅನಿವಾರ್ಯತೆ ರೈತರಿಗಿದೆ. ಪ್ರಾಕೃತಿಕ ವಿಕೋಪ, ಮಾರುಕಟ್ಟೆ ಏರುಪೇರು, ಕೌಟುಂಬಿಕ ಹಾಗೂ ಇನ್ನಿತರೆ ಸಮಸ್ಯೆಗಳ ನಿವಾರಣೆಗೆ ರೈತರ ಜತೆ ನಿಲ್ಲಬಹುದಾದ ಪ್ರತಿಷ್ಠಿತ ಎನ್‌ಜಿಒಗಳ/ಬಲಾಢ್ಯ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ವಿಭಾಗದ (Corporate Social Responsibility- CSR) ನಿಯೋಜಿತ ಅಧಿಕಾರಿಗಳ ಮಾರ್ಗದರ್ಶನ ತೀರಾ ಅವಶ್ಯಕ.

ಕೃಷಿ ಆಧಾರಿತ ಭಾರತದ ಗ್ರಾಮೀಣ ಅರ್ಥವ್ಯವಸ್ಥೆಯು ಸಾಮಾನ್ಯ ತರ್ಕಕ್ಕೆ ನಿಲುಕದ ಒಗಟು. ಇಲ್ಲಿ ಕೇವಲ ಕಾನೂನು, ಯೋಜನೆಗಳು ಉದ್ದೇಶಿತ ಫಲ ನೀಡುವುದಿಲ್ಲ. ಯೋಜನೆಗಳ ಅನುಷ್ಠಾನದ ಹೊಣೆ ಹೊತ್ತ ಅಧಿಕಾರಿಗಳು ರೈತರ ಭಾವನೆಗಳನ್ನು ಅತಿ ಸೂಕ್ಷ್ಮವಾಗಿ ಅರಿತು, ಸಾಮಾನ್ಯರ ಜತೆ ಬೆರೆಯುವ ಅಸಾಮಾನ್ಯ ಮಾನವೀಯ ನಡೆಯನ್ನು ತೋರಿದಲ್ಲಿ ಮಾತ್ರ ಅಂದುಕೊಂಡ ಗುರಿಯನ್ನು ಮುಟ್ಟಬಹುದು. ಹಾಗಾಗಿ ಇಂಥ ಸಂಕೀರ್ಣ ಸಮಸ್ಯೆಯನ್ನು ಬಗೆಹರಿಸಲು ನಿಷ್ಠಾವಂತ ಮಾನವ ಸಂಪನ್ಮೂಲಗಳ ದಂಡು ಹಳ್ಳಿಗಳತ್ತ ಮುಖಮಾಡಬೇಕಾಗಿದೆ.

(ಲೇಖಕರು ಹವ್ಯಾಸಿ ಬರಹಗಾರರು)

Viswavani pg 07

